**<u>ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ನಡವಳಿಗಳು</u>**

**ವಿಷಯ:-** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಅನುದಾನಿತ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು, ಸಂಸ್ಥೆಯ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ 2023-24 ನೇ ಸಾಲಿನಲ್ಲಿ ಎಪ್ರಿಲ್-2023 ರಿಂದ ಡಿಸೆಂಬರ್-2023 ರವರೆಗಿನ ಒಂಬತ್ತು ಮಾಹೆಗಳ ಸರ್ಕಾರದ ಪಾಲಿನ ಶೇ 85% ಸಹಾಯಾನುದಾನ (ವೇತನ) ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರಿ ಆದೇಶ ಸಂಖ್ಯೆ:ಇಡಿ/184/ಟಿಪಿಇ/2009, ದಿ:27.07.2009.
2. ಸರ್ಕಾರದ ಸುತ್ತೋಲೆ ಸಂ: ಆಇ 34 ಟಿ.ಎ.ಆರ್ 2020, ದಿನಾಂಕ 05-01-2022.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 53 ಹೆಚ್‌ಪಿಟಿ 2023, ದಿನಾಂಕ:12.04.2023 ಮತ್ತು 02.08.2023.
4. ಸರ್ಕಾರದ ಪತ್ರ ಸಂಖ್ಯೆ: ಇಡಿ/113/ಯುಆರ್‌ಸಿ/2018, ದಿನಾಂಕ:10.03.2023.
5. ಸರ್ಕಾರದ ಅದೇಶ ಸಂಖ್ಯೆ:ಇಡಿ/447/ಯುಆರ್‌ಸಿ/2023,ಬೆಂಗಳೂರು, ದಿನಾಂಕ:21-02-2024.

**<u>ಪ್ರಸ್ತಾವನೆ:</u>**

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಸಿಬ್ಬಂದಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡುವ ಶೇ.85ರಷ್ಟು ಸಹಾಯಾನುದಾನವನ್ನು ಪ್ರತಿ ತಿಂಗಳು ರಾಷ್ಟ್ರೀಕೃತ ಬ್ಯಾಂಕ್‌ಗೆ ಜಮೆ ಮಾಡುವ ಮೂಲಕ ಸಿಬ್ಬಂದಿ ವರ್ಗದವರುಗಳಿಗೆ (ಬೋಧಕ ಮತ್ತು ಬೋಧಕೇತರ) ವಿತರಿಸಲು ಸರ್ಕಾರವು ಅನುಮತಿಸಿರುತ್ತದೆ ಹಾಗೂ ಈ ಸಂಬಂಧ ಮುಂದಿನ ಅಗತ್ಯ ಕ್ರಮವನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರು ಕೈಗೊಳ್ಳಲು ಆದೇಶಿಸಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಸುತ್ತೋಲೆ ಪತ್ರದಲ್ಲಿ ಸರ್ಕಾರದಿಂದ ವೇತನ ಸಹಾಯಾನುದಾನ ಪಡೆಯುತ್ತಿರುವ ಎಲ್ಲಾ ನಿಗಮ/ಮಂಡಳಿ/ನಿಯಮಿತ/ವಿಶ್ವವಿದ್ಯಾಲಯಗಳು ಮತ್ತು ಇನ್ನಿತರ ಸ್ವಾಯತ್ತ ಸಂಸ್ಥೆಗಳು ಮಾರ್ಚ್ 2022 ರೊಳಗಾಗಿ ಕಡ್ಡಾಯವಾಗಿ ಹೆಚ್.ಆರ್.ಎಂ.ಎಸ್. ನಲ್ಲಿ ಸಿಬ್ಬಂದಿ ವಿವರಗಳನ್ನು ದಾಖಲಿಸುವಂತೆ ತಿಳಿಸಲಾಗಿದೆ.

ಉಲ್ಲೇಖ (3)ರ ರಲ್ಲಿನ ಸರ್ಕಾರದ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಬಿ.ವಿ.ಬಿ. ಇಂಜಿನಿಯರಿಂಗ್ ಮಹಾವಿದ್ಯಾಲಯ(ಅನುದಾನಿತ), ಹುಬ್ಬಳ್ಳಿ, ಸಂಸ್ಥೆಯ ಅನುದಾನಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಸೇವೆಯನ್ನು ಕ್ರಮಬದ್ಧಗೊಳಿಸಿ, ಸದರಿ ಸಂಸ್ಥೆಗೆ ಯಾವುದೇ ರೀತಿಯ ವೇತನಾನುದಾನವನ್ನು ಮುಂದುವರೆಸುವುದಾಗಲಿ, TBS Benefit ವಿಸ್ತರಿಸುವುದಕ್ಕಾಗಲೀ ನಿಯಮಾನುಸಾರ ಅವಕಾಶವಿರುವುದಿಲ್ಲ ಎಂಬುದಾಗಿ ಆದೇಶಿಸಿರುತ್ತಾರೆ, ಅದರಂತೆ ಬಿ.ವಿ.ಬಿ. ಇಂಜಿನಿಯರಿಂಗ್ ಮಹಾವಿದ್ಯಾಲಯ, ಹುಬ್ಬಳ್ಳಿ, ಸಂಸ್ಥೆಗೆ ಏಪ್ರಿಲ್-2023 ರಿಂದ ಫೆಬ್ರವರಿ-2024 ರವರೆವಿಗೂ ಯಾವುದೇ ರೀತಿಯ ವೇತನಾನುದಾನವನ್ನು ಬಿಡುಗಡೆಗೊಳಿಸದೇ ತಡೆ ಹಿಡಿಯಲಾಗಿರುತ್ತದೆ.

ಉಲ್ಲೇಖ(4)ರಲ್ಲಿ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು ಸಂಸ್ಥೆಯ ಅನುದಾನಿತ ವಿಭಾಗದ ಸಿಬ್ಬಂದಿಗಳಿಗೆ ವೇತನಾನುದಾನವನ್ನು 2025-26 ನೇ ಶೈಕ್ಷಣಿಕ ಸಾಲಿನ ಅಂತ್ಯದವರೆಗೆ ಮಾತ್ರ ನಿಯಮಾನುಸಾರ ಮುಂದುವರೆಸತಕ್ಕದ್ದು, ಪ್ರಸ್ತಾಪಿತ ಅನುದಾನಿತ ಸಿಬ್ಬಂದಿಗಳಿಗೆ ಏಪ್ರಿಲ್-2023 ರಿಂದ ತಡೆಹಿಡಿಯಲಾದ ವೇತನಾನುದಾನವನ್ನು ಮತ್ತು ನಿವೃತ್ತಿ ಉಪದಾನ ಸೌಲಭ್ಯ ಗಳನ್ನು ಬಿಡುಗಡೆ ಮಾಡಲು ನಿಯಮಾನುಸಾರ ಅಗತ್ಯ ಕ್ರಮಗೊಳ್ಳತಕ್ಕದ್ದು, ಎಂಬುದಾಗಿ ಆದೇ ಶಿಸಲಾಗಿರುತ್ತದೆ, ಸದರಿ ಸರ್ಕಾರದ ಆದೇಶಕ್ಕೆ ಈ ಕಛೇರಿಯ ಹಿಂಬರಹ ಪತ್ರ ಸಂಖ್ಯೆ:ಡಿಟಿಇ 10 ಡಿವಿಪಿ(1) 2023/1441, ದಿನಾಂಕ:27.02.2024 ರಲ್ಲಿ ಮಾನ್ಯ ನಿರ್ದೇಶಕರು ಸರ್ಕಾರದ ಆದೇಶದಂತೆ ಕ್ರಮ ವಹಿಸುವ ಸಲುವಾಗಿ ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಕೇಂದ್ರ ಕಛೇರಿಯ ಹೆಚ್.ಆರ್.ಎಂ.ಎಸ್. ವಿಭಾಗದವರು ಈ ಕಡತ ಸಂ:DTE-CDC0EGU/9/2023-EGOV-DEPT TECH EDUCATION **(E:1073462)** ರಲ್ಲಿ ಬಿ.ವಿ.ಬಿ. ಇಂಜಿನಿಯರಿಂಗ್

ಕಾಲೇಜು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಎಪ್ರಿಲ್-2023 ರಿಂದ ಡಿಸೆಂಬರ್-2023 ರವರೆಗಿನ ಹತ್ತು ಮಾಹೆಗಳ ಸಹಾಯಾನುದಾನ (ವೇತನ) ರೂ.6,85,99,252/- ಗಳನ್ನು ಖಜಾನೆ-2 ತಂತ್ರಾಂಶದ ನಮೂನೆಯನ್ನು ಸಲ್ಲಿಸಿರುತ್ತಾರೆ (ಸದರಿ ಬಿಲ್ಲನ್ನು ಸಂಸ್ಥೆಯ ಪ್ರಾಚಾರ್ಯರು ದೃಢೀಕರಿಸಿರುತ್ತಾರೆ). ಆದುದರಿಂದ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಎಪ್ರಿಲ್-2023 ರಿಂದ ಡಿಸೆಂಬರ್-2023 ರವರೆಗಿನ ಒಂಬತ್ತು ಮಾಹೆಗಳ ಸಹಾಯಾನುದಾನ (ವೇತನ) ಬಿಡುಗಡೆ ಮಾಡಬಹುದಾಗಿದೆ.

2023-24 ನೇ ಸಾಲಿಗೆ ಸರ್ಕಾರವು ಒದಗಿಸಿರುವ ಅನುದಾನದಲ್ಲಿ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಎಪ್ರಿಲ್-2023 ರಿಂದ ಡಿಸೆಂಬರ್-2023 ರವರೆಗಿನ ಮಾಹೆಗಳ ಸರ್ಕಾರದ ಸಹಾಯಾನುದಾನ (ವೇತನ) ರೂ. **6,85,99,252**/- (ರೂಪಾಯಿ ಆರು ಕೋಟಿ ಎಂಬತ್ತೈದು ಲಕ್ಷದ ತ್ತೊಂಬತ್ತೊಂಬತ್ತು ಸಾವಿರದ ಎರಡು ನೂರು ಐವತ್ತೆರಡು ಮಾತ್ರ) ಗಳನ್ನು 2023-24 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ- 2203-00-112-0-07-101 ರಡಿ ಖಜಾನೆ-2 ತಂತ್ರಾಂಶದ ಮುಖಾಂತರ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ.

ಆದುದರಿಂದ, ಈ ಕೆಳಕಂಡ ಆದೇಶ,

**<u>ಕಛೇರಿ ಆದೇಶ ಸಂ: ಡಿಟಿಇ 18 ಜಿಆರ್‌ಟಿ (2) 2023, ಬೆಂಗಳೂರು, ದಿನಾಂಕ: 15-03-2024.</u>**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅನುದಾನಿತ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು, ಹುಬ್ಬಳ್ಳಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ **ಎಪ್ರಿಲ್-2023 ರಿಂದ ಡಿಸೆಂಬರ್-2023** ರವರೆಗಿನ **ಒಂಬತ್ತು ಮಾಹೆಗಳ** ಸರ್ಕಾರದ ಪಾಲಿನ ಶೇ.85 ರಷ್ಟು ಸಹಾಯಾನುದಾನ (ವೇತನ) **ರೂ. 6,85,99,252**/- **(ರೂಪಾಯಿ ಆರು ಕೋಟಿ ಎಂಬತ್ತೈದು ಲಕ್ಷದ ತ್ತೊಂಬತ್ತೊಂಬತ್ತು ಸಾವಿರದ ಎರಡು ನೂರು ಐವತ್ತೆರಡು ಮಾತ್ರ)** ಗಳನ್ನು ಖಜಾನೆ-2 ತಂತ್ರಾಂಶದ ಮೂಲಕ 2023-24 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-112-0-07-101 ರಡಿ ಬಿಡುಗಡೆ ಮಾಡಿ ಆದೇಶಿಸಿದ್ದು, ಸದರಿ ಖರ್ಚನ್ನು ಲೆಕ್ಕ ಶೀರ್ಷಿಕೆ 2203-00-112-0-07-101 ರಡಿಯಲ್ಲಿ ಭರಿಸಲು ಕೂಡ ಆದೇಶಿಸಲಾಗಿದೆ.

| Sl. No. | GIA Engineering Colleges | EST | MONTH | Gross | Deductions | Net | No. of Employees | HRMS Bill No. |
|---|---|---|---|---|---|---|---|---|
| 1 | B V Bhommareddi College of Engg and Technology Hubli | 2 | APRIL | 7588517 | 2420384 | 5168133 | 51 | HG2305792721 |
| 2 | | 2 | MAY | 7501621 | 2402763 | 5098858 | 49 | HG2306802201 |
| 3 | | 2 | JUNE | 7832368 | 2390158 | 5442210 | 49 | HG2307811179 |
| 4 | | 2 | JULY | 7912206 | 2390248 | 5521958 | 49 | HG2403943578 |
| 5 | | 2 | AUGUST | 7478756 | 2310937 | 5167819 | 45 | HG2403943579 |
| 6 | | 2 | SEPTEMBER | 7478756 | 2309404 | 5169352 | 45 | HG2403943581 |
| 7 | | 2 | OCTOBER | 7478756 | 2354193 | 5124563 | 45 | HG2403943583 |
| 8 | | 2 | NOVEMBER | 7664136 | 2360615 | 5303521 | 45 | HG2403943586 |

| | | | | | | | | |
|---|---|---|---|---|---|---|---|---|
| **9** | | 2 | DECEMBER | 7664136 | 2382033 | 5282103 | 45 | HG2403943587 |
| **10** | | | | **68599252** | **21320735** | **47278517** | | |

ಈಗ ಬಿಡುಗಡೆ ಮಾಡಿರುವ ಎಪ್ರಿಲ್-2023 ರಿಂದ ಡಿಸೆಂಬರ್-2023 ರವರೆಗಿನ ಒಂಬತ್ತು ಮಾಹೆಗಳ ಸರ್ಕಾರದ ಪಾಲಿನ ಸಹಾಯಾನುದಾನ (ವೇತನ) ಒಟ್ಟು **ರೂ.6,85,99,252**/- (ರೂಪಾಯಿ ಆರು ಕೋಟಿ ಎಂಬತ್ತೈದು ಲಕ್ಷದ ತ್ತೊಂಬತ್ತೊಂಬತ್ತು ಸಾವಿರದ ಎರಡು ನೂರು ಐವತ್ತೆರಡು ಮಾತ್ರ) ಗಳನ್ನು ಖಜಾನೆ-2 ರಲ್ಲಿ ವೆಚ್ಚ ಭರಿಸಲು ಆದೇಶಿಸಲಾಗಿದೆ.

**<u>ಷರತ್ತು ಮತ್ತು ನಿಬಂಧನೆಗಳು:-</u>**

1. ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಸಹಾಯಾನುದಾನವನ್ನು ಸರ್ಕಾರದ ಪಾಲಿನ ಶೇ.85ರಷ್ಟು ವೇತನವನ್ನು ಪರಿಗಣಿಸಲಾಗಿದೆ. ಈ ಸಹಾಯಾನುದಾನ ಬಿಡುಗಡೆಯು ಇಲಾಖೆಯ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.
2. ಆಡಳಿತ ಮಂಡಳಿಯ ಪಾಲಿನ ಶೇ.15ರ ಮೊತ್ತವನ್ನು ಸಿಬ್ಬಂದಿಗಳ ಖಾತೆಗಳಿಗೆ ಪಾವತಿಸತಕ್ಕದ್ದು.
3. ಯಾವೊಬ್ಬ ನೌಕರನಿಗೆ ಹೆಚ್ಚಿನ ಅನುದಾನ ಪಾವತಿಯಾಗಿದ್ದು ಕಂಡು ಬಂದಲ್ಲಿ, ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.
4. 2023-24ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ 'ಬಳಕೆ ಪ್ರಮಾಣ ಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕ ಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.
5. ಪ್ರತಿ ತಿಂಗಳು ಶಾಸನ ಬದ್ಧ ಕಟಾವುಗಳನ್ನು ಮಾಡಿ ಆಯಾ/ಸಂಬಂಧಪಟ್ಟ ಇಲಾಖೆಗಳಿಗೆ ತಪ್ಪದೆ ಕಡ್ಡಾಯವಾಗಿ ಕಳುಹಿಸಿ ಈ ಕಛೇರಿಗೆ ಮಾಹಿತಿ ಸಲ್ಲಿಸತಕ್ಕದ್ದು.
6. ಈಗ ಬಿಡುಗಡೆ ಮಾಡಿರುವ ಅನುದಾನ ಮೊತ್ತದ ಖರ್ಚನ್ನು 2023-24ನೇ ಸಾಲಿನ ಕೆಳಕಂಡ ಲೆಕ್ಕ ಶೀರ್ಷಿಕೆಯಲ್ಲಿ ಭರಿಸತಕ್ಕದ್ದು. 2203-ತಾಂತ್ರಿಕ ಶಿಕ್ಷಣ-00-112-ಸರ್ಕಾರೇತರ ತಾಂತ್ರಿಕ ಕಾಲೇಜುಗಳು, ಹಾಗೂ ಸಂಸ್ಥೆಗಳಿಗೆ ಸಹಾಯಾನುದಾನ-0-07-ಸರ್ಕಾರೇತರ ತಾಂತ್ರಿಕ ಶಾಲೆಗಳು-01-ಸಹಾಯಾನುದಾನ (2203-00-112-0-07-101).

**"ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ:

1. ಆಯುಕ್ತಾಲಯದ ಬಿಎಲ್‌ಎಸ್ (3) ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ.
2. ಪಟ್ಟಿಯಲ್ಲಿ ಸೂಚಿಸಿರುವ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲರುಗಳಿಗೆ.

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಛೇರಿ, ಬೆಂಗಳೂರು
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್‌ಖಜಾನೆ, ಬೆಂಗಳೂರು.
4. ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ (ಅ) ಲೆಕ್ಕಾಧಿಕಾರಿಗಳು [ಬಿಲ್ಸ್] (ಆ) ನಗದು ಶಾಖೆ (ಇ) ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ ಇ-ಗವರ್ನೆನ್ಸ್ ವಿಭಾಗ- ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.